ಆ) ಸದರಿ ನೇಮಕಾತಿಗೆ ಸಂಬಂಧಿಸಿದಂತೆ ಬಂದ ಅರ್ಜಿಗಳ ಸಂಖ್ಯೆ ಹಾಗೂ ಅವುಗಳಲ್ಲಿ ಹರಿಜನ ಗಿರಿಜನ ಅಭ್ಯರ್ಥಿಗಳಿಂದ ಬಂದ ಅರ್ಜಿಗಳ ಸಂಖ್ಯೆ ಮತ್ತು ನೇಮಕಾತಿ ಮಾಡಿಕೊಳ್ಳಲಾದ ಹರಿಜನ, ಗಿರಿಜನರ ಸಂಖ್ಯೆ ಎಷ್ಟು ? (ವರ್ಷವಾರು ವಿವರ ನೀಡುವುದು)

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಆ) ಖಿರಿಟಿ ಹುದ್ದೆಗಳು.

ಆ) ಜೂನಿಯರ್ ಇಂಜಿನಿಯರ್‌ಗಳನ್ನು ವೃತ್ತಮಟ್ಟದಲ್ಲಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ ಆದ್ದರಿಂದ ಈ ಬಗ್ಗೆ ಬಂದ ಅರ್ಜಿಗಳ ವಿವರ ಸಂಗ್ರಹಿಸಲಾಗುತ್ತಿದೆ. ನೇಮಕಾತಿ ಮಾಡಿಕೊಳ್ಳಲಾದ ಹರಿಜನ ಗಿರಿಜನ ಜೂನಿಯರ್ ಇಂಜಿನಿಯರುಗಳ ಸಂಖ್ಯೆ ಕೆಳಕಡಂತಿದೆ.

ವರ್ಷ	ನೇಮಕಾತಿ ಜೂನಿಯರ್ ಇಂಜಿನಿಯರುಗಳ ಸಂಖ್ಯೆ	
	ಹರಿಜನ	ಗಿರಿಜನ
೧) ೧೯೮೩	೩	೧
೨) ೧೯೮೪	೪೧	೧೨
೩) ೧೯೮೫	೧೨	—
೪) ೧೯೮೬	೯	೨
೫) ೧೯೮೭	೧೭	೫

ಸಭೆಯಂ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು.—ಈಗ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಭಾರತ ಸಂವಿಧಾನದ ೧೫೧ (೨) ಅನುಚ್ಛೇದದ ಮೇರೆಗೆ ಕರ್ನಾಟಕ ಸರ್ಕಾರದ ೧೯೮೫-೮೬ ನೇ ಸಾಲಿನ ವಿತ್ತೀಯ ಲೆಕ್ಕಪತ್ರಗಳು, ಧನವಿನಿಯೋಗ ಲೆಕ್ಕಪತ್ರಗಳು ಮತ್ತು ನಿಯಂತ್ರಕರು ಹಾಗೂ ಭಾರತದ ಮಹಾಲೇಖಾಪರೀಕ್ಷಕರ (ಸಿವಿಲ್) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ಅರ್ಜಿಯನ್ನೂ ಪ್ರಿಸುವುದು.

ಮನವಿಯಂನ್ನೊಪ್ಪಿಸುವುದಂ

ಶ್ರೀ ಸಿ.ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ, ಹಾವೇರಿಯಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಛೇರಿಯಲ್ಲಿ ನಡೆಯುತ್ತಿರುವ ಗೂಂಡಾಗಿರಿಯನ್ನು ಹತ್ತಿಕ್ಕುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಸದಸ್ಯರ ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು.—ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಜಿ. ನಾರಾಯಣಕುಮಾರ್ ಅವರು ತಮ್ಮ ಅನಾರೋಗ್ಯದ ಕಾರಣವಾಗಿ ಪ್ರಸ್ತುತ ವಿಧಾನಸಭಾ ಅಧಿವೇಶನಕ್ಕೆ ಗೈರುಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.